info@buntsanghablr.com
buntsanghabangaloare@yahoo.in

# ಸ್ನೇಹ ಚಿಂತನೆ

ಮಾಸ ಪತ್ರಿಕೆ

ಡಿಸೆಂಬರ್ 2025
ಸಂಪುಟ 21 ಸಂಚಿಕೆ 12

ಸಂಚಿಕೆ ಬೆಲೆ ರೂ. 1/-




ದೀಪಾವಳಿ ಸಂಭ್ರಮ



ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ



ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ
ಕರ್ನಾಟಕ ರಾಜ್ಯೋತ್ಸವ ಆಚರಣೆ



ಬಂಟರ ಸಂಘ ಆರ್.ಎನ್.ಎಸ್. ಸಂಜೆ
ಕಾಲೇಜು-ಗ್ರಾಜ್ಯುಯೇಷನ್ ಡೇ

ಬಂಟರ ಸಂಘ ಬೆಂಗಳೂರು
BUNTS' SANGHA BANGALORE
# 324, Bunts' Sangha Complex, Chord Road, Vijayanagar, Bengaluru - 40.
Phone : 080-23399323 | 23399636 | Email : info@buntsanghablr.com

ಅಭಯ®
ಸೇವಾ ಫೌಂಡೇಶನ್

ಅಭಯ ಸೇವಾ ಫೌಂಡೇಶನ್ [ರಿ.]

## ಕೊಟ್ಟು ಮರೆಯುವ ಸುಖದ ಗುಟ್ಟು ಅರಿಯಲೇಬೇಕೆ? ಇಟ್ಟುಕೊ ಮುಗಿಲ ನೆನಪು.

ಅದು ಮಂದಾರ್ತಿ.ಮಾತೆ ದುರ್ಗಾಪರಮೇಶ್ವರಿಯ ತವರು. ಆಕೆಯ ಪದತಲದಿಂದ, ಆಕೆಯ ಸಿರಿಮುಡಿಯ ಗಂಧಪ್ರಸಾದವನ್ನು ನೊಸಲಿಗಿರಿಸಿಕೊಂಡು ಬೆಂಗಳೂರು ಬಸ್ಸು ಹತ್ತಿದ ಮಂದಾರ್ತಿಯ ಉಮೇಶ ಶೆಟ್ಟಿಯವರ ಕಣ್ಣುಗಳಲ್ಲಿ ಕನಸು ಕದಲುತ್ತಿತ್ತು: ಬಸ್ಸಿನ ಕುಲುಕಿನ ಜೊತೆಗೆ ಸ್ಪರ್ಧೆಗಿಳಿದಂತೆ!

ಬೆಂಗಳೂರಲ್ಲಿ ಉಮೇಶ ಶೆಟ್ಟಿಯವರ ಸ್ವಯಂ ಪರಿಶ್ರಮಕ್ಕೆ ದೈವಾನುಗ್ರಹವೂ ಜೊತೆಗೂಡಿ,ಬದುಕು ಒಂದು ಹಂತಕ್ಕೆ ಬಂದು ನಮ್ಮ ಮಂದಾರ್ತಿ ಉಮೇಶಣ್ಣ , ನಮ್ಮ ಉಮೇಶ ಶೆಟ್ರು ಎಂದು ಬೆಂಗಳೂರು ಶ್ರೀಯುತರನ್ನು ಗುರುತಿಸಲಾರಂಭಿಸಿದ್ದನ್ನು ಗುರುತಿಸಿದ ಉಮೇಶ ಶೆಟ್ಟಿಯವರು ಮತ್ತೊಂದು ಕನಸಿಗೆ ಕಣ್ಣಾದರು.ಆ ಕನಸಿನ ಹೆಸರು ಅಭಯ ಸೇವಾ ಫೌಂಡೇಶನ್: ಭರವಸೆಯ ನಾಳೆಗಳಿಗಾಗಿ! ನೊಂದವರ,ದನಿಯಿಲ್ಲದವರ, ಸಂಕಷ್ಟದಲ್ಲಿರುವವರ ಕಣ್ಣೀರ ಒಂದೆರೆಡು ಹನಿಗಳನ್ನಾದರೂ ಒರೆಸಿದ ಸಂತೃಪ್ತಿಯ ಸಂಕಲ್ಪದೊಂದಿಗೆ ಮೊದಲ್ಗೊಂಡ ಅಭಯ ಸೇವಾ ಫೌಂಡೇಶನ್ ತನ್ನ ಹಾದಿಯಲ್ಲಿ ಗುರುತರ ಹೆಜ್ಜೆ ಗುರುತುಗಳನ್ನು ಪಡಿಮೂಡಿಸಿ ಸಮಾಜ ಸೇವಾ ಕೈಂಕರ್ಯದಲ್ಲಿ ದಾಪುಗಾಲು ಇಡುತ್ತಿದೆ. ಫೌಂಡೇಶನ್‌ನ ಮುಂಚೂಣಿಯಲ್ಲಿ **ಎಂ.ಬಿ.ಉಮೇಶ ಶೆಟ್ಟಿ**ಯವರಿದ್ದಾರೆ. ಅವರ ಬಳಗ ಶ್ರೀಯುತರ ಸತ್ಕಾರ್ಯಕ್ಕೆ ಸತತವಾಗಿ ಸಾಥ್ ನೀಡುತ್ತಿದೆ

## ಅಭಯ ಸೇವಾ ಫೌಂಡೇಶನ್ ಸಮಾಜಮುಖಿ ಕೆಲಸಗಳಲ್ಲಿ ಪ್ರಮುಖವಾದವುಗಳನ್ನು ಹೆಸರಿಸುವುದಾದರೆ:

- ನೆತ್ತರ ನೆರವು: ಹಲವಾರು ಬಾರಿ ಉಚಿತ ರಕ್ತದಾನ ಶಿಬಿರ ಏರ್ಪಡಿಸಿ 500 ಕ್ಕೂ ಹೆಚ್ಚು ಯುನಿಟ್ ರಕ್ತ ಸಂಗ್ರಹಿಸಿ ಆಸ್ಪತ್ರೆಗಳಿಗೆ, ಬ್ಲಡ್ ಬ್ಯಾಂಕ್‌ಗಳಿಗೆ ನೀಡಲಾಗಿದೆ.
- ಕೋವಿಡ್-19 ಸಂದರ್ಭದಲ್ಲೂ ಅತ್ಯಧಿಕ ಯುನಿಟ್ ರಕ್ತವನ್ನು ಸಂಗ್ರಹಿಸಲಾಗಿದ್ದು ಇದು ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ದಾಖಲಾಗಿದೆ.
- ಹಲವಾರು ವರ್ಷಗಳಿಂದ ಕರಾವಳಿ ಹಾಗೂ ಬೆಂಗಳೂರು ಭಾಗದ ಶಾಲೆಗಳಿಗೆ ಶೈಕ್ಷಣಿಕ ವಸ್ತುಗಳ ವಿತರಣೆ.
- ಕೋವಿಡ್-19 ಅಭಿಯಾನ: ಬಂಟರ ಸಂಘದ ಸಹಯೋಗದಲ್ಲಿ ಉಚಿತ ಲಸಿಕಾ ಶಿಬಿರ, ಆಹಾರ ಮತ್ತು ಕಿಟ್ ವಿತರಣೆ, ಆಕ್ಸಿಜನ್ ಕಾನ್ಸಟ್ರೇಟರ್ ವಿತರಣೆ ಹಾಗೂ ಸಾರಿಗೆ ವ್ಯವಸ್ಥೆ.
- ಮಡಿಕೇರಿ ನೆರೆ ಹಾವಳಿ: 20 ಕ್ಕೂ ಹೆಚ್ಚು ಗ್ರಾಮಗಳಿಗೆ ಭೇಟಿ ನೀಡಿ ಬಟ್ಟೆ ,ಆಹಾರ, ಧನಸಹಾಯ ವಿತರಣೆ.
- ಪರಿಸರ ಸಂರಕ್ಷಣೆ: ಟೆರೇಸ್ ಗಾರ್ಡನ್, ವನ ಮಹೋತ್ಸವ ಕಾರ್ಯಕ್ರಮ,ಪರಿಸರ ಉಳಿಸಿ-ಬೆಳಸಿ ಜಾಥಾ.
- ಆರೋಗ್ಯ ತಪಾಸಣೆ: ಮಣಿಪಾಲ ಮತ್ತು ಕಿದ್ವಾಯಿ ಮುಂತಾದ ಆಸ್ಪತ್ರೆಗಳ ಸಹಯೋಗದೊಂದಿಗೆ ಉಚಿತ ಶಿಬಿರ ಆರೋಗ್ಯ ಶಿಬಿರಗಳ ಆಯೋಜನೆ.
- ಕಾರ್ಡ್ ಮಾಹಿತಿ ಶಿಬಿರ: ಆಧಾರ್, ಹಿರಿಯ ನಾಗರಿಕರ ಕಾರ್ಡ್ ಇತ್ಯಾದಿಗಳ ಕುರಿತಾದ ಮಾಹಿತಿ ಹಾಗೂ ನೋಂದಣಿ ಕಾರ್ಯಾಗಾರ.
- ಕಾಮಧೇನು ಯೋಜನೆ: ಹೈನುಗಾರಿಕೆಯಿಂದ ಜೀವನ ಸಾಗಿಸಲು ಅರ್ಹ ಫಲಾನುಭವಿಗಳಿಗೆ ಕಾಮಧೇನು ವಿತರಣೆ.

## ಅಭಯ ಸೇವಾ ಫೌಂಡೇಶನ್‌ನ ಮುಂದಿರುವ ಯೋಜನೆಗಳು:

- ಉಚಿತ ಆರೋಗ್ಯ ತಪಾಸಣೆ ಶಿಬಿರಗಳು.
- ತುರ್ತು ಸಂದರ್ಭಗಳಲ್ಲಿ ರಕ್ತದಾನ ಶಿಬಿರಗಳು.
- ಮರಣದ ಸಂದರ್ಭದಲ್ಲಿ ಕುಟುಂಬದೊಂದಿಗೆ ನಿಂತು ಶವ ಸಂಸ್ಕಾರದಲ್ಲಿ ನೆರವಾಗುವುದು.
- ಉಚಿತ ಆಂಬುಲೆನ್ಸ್ ಸೇವೆ.
- ಪ್ರಕೃತಿ ವಿಕೋಪದ ಸಂದರ್ಭಗಳಲ್ಲಿ ತುರ್ತು ಸಹಾಯ.
- ಅನಾಥ ಮಕ್ಕಳ ವಿದ್ಯಾಭ್ಯಾಸಕ್ಕೆ ದತ್ತು ಸ್ವೀಕಾರ.
- ಪಶು-ಪಕ್ಷಿ, ಬೀದಿ ನಾಯಿಗಳ ರಕ್ಷಣೆ.
- ಪರಿಸರದ ಆರೋಗ್ಯಕ್ಕಾಗಿ ಟೆರೇಸ್ ಗಾರ್ಡನ್ ಮತ್ತು ಗಿಡ ನೆಡುವ ಕಾರ್ಯಕ್ರಮಗಳು.
- ವೃದ್ಧಾಶ್ರಮ ಮತ್ತು ಅನಾಥಾಶ್ರಮಗಳಿಗೆ ಸೂರನ್ನು ಒದಗಿಸಿ ಸಹಾಯ.
- ಅಭಯ ಸೇವಾ ಫೌಂಡೇಶನ್‌ನ ವಿಕೇಂದ್ರೀಕರಣಗೊಳಿಸಿ, ಹೊಸ ಘಟಕಗಳ ಸ್ಥಾಪನೆ ಮೂಲಕ ಯುವಜನತೆಯಲ್ಲಿ ಸಮಾಜ ಸೇವೆಯ ಅರಿವು ಮೂಡಿಸುವುದು.
- ಉದ್ಯೋಗ ಅರಸುವವರಿಗೆ ಉದ್ಯೋಗದ ಅವಕಾಶ ಕಲ್ಪಿಸುವುದು.

ಸೇವಾ ಸಂಕಲ್ಪ
ಸೇವೆಗಿಲ್ಲಿ ನೂರು ಕರಗಳು!

**ಸಮಾಜ ಸೇವೆಯ ತುಡಿತವುಳ್ಳವರು ಫೌಂಡೇಶನ್ ಸದಸ್ಯರಾಗಬಹುದು. ಸದಸ್ಯರು ತಮ್ಮ ಶಕ್ತಿಯನ್ವಯ ಪ್ರತಿ ತಿಂಗಳು ಅಥವಾ ವರ್ಷಕ್ಕೆ ಹಣವನ್ನು ಫೌಂಡೇಶನ್ ಖಾತೆಗೆ ವರ್ಗಾಯಿಸಬಹುದು. ಆ ಹಣವನ್ನು ಸದ್ವಿನಿಯೋಗ ಮಾಡುವ ಜವಾಬ್ದಾರಿಯನ್ನು ಫೌಂಡೇಶನ್ ವಹಿಸಿಕೊಳ್ಳುತ್ತದೆ. ಪ್ರತಿ ತಿಂಗಳು ಫೌಂಡೇಶನ್ ಖಾತೆಯ ಆಡಿಟ್ ನಡೆಯುತ್ತದೆ ಹಾಗೂ ರಿಪೋರ್ಟ್ ಕಚೇರಿಯಲ್ಲಿರುತ್ತದೆ.**

**ಸಮಾಜ ಸೇವೆ ಮಾಡುವ ತುಡಿತವಿಟ್ಟುಕೊಂಡ ಅನೇಕರಿಗೆ ಅಭಯ ಸೇವಾ ಫೌಂಡೇಶನ್ ಒಂದು ಸೇತುವೆಯಾಗಲಿದೆ.**
**ಉಳ್ಳವರಿಂದ ಹೊಂಚಿ ತಂದು ಸಮಾಜದ ಕಟ್ಟಕಡೆಯ ವ್ಯಕ್ತಿಗೆ ತಲುಪಿಸಿ, ಅವರೂ ಸಮಾಜದ ಉನ್ನತ ಸ್ಥಾನಕ್ಕೇರಿಸುವುದೇ ಇದರ ಉದ್ದೇಶ.**

**"ಫಲದ ನಂಟು ತೊರೆದು ಭಗವಂತನ ಪೂಜೆ ಎಂದು ಉಪಕಾರ ಕರ್ಮ ಮಾಡು" ಎಂಬ ಗೀತೆಯ ಧ್ಯೇಯದೊಂದಿಗೆ ಸಮಾಜ ಕಟ್ಟುವ ಕಾರ್ಯದಲ್ಲಿ ಎಲ್ಲರೂ ಜೊತೆಯಾಗೋಣ ಎನ್ನುವ ಆಶಯದೊಂದಿಗೆ ಅಭಯ ಸೇವಾ ಫೌಂಡೇಷನ್ ಕಾರ್ಯತತ್ಪರವಾಗಿದೆ.**



**ಸಂಪರ್ಕ**
**ಉಮೇಶ್ ಶೆಟ್ಟಿ ಎಂ.ಬಿ**
**ಸಂಸ್ಥಾಪಕ ಅಧ್ಯಕ್ಷರು**
**ಅಭಯ ಸೇವಾ ಫೌಂಡೇಶನ್ (ರಿ.)**
**9845025921**

Folllow us on:

ADVT.

# ಸ್ನೇಹ ಚಿಂತನೆ

Monthly Magazine Published by

## BUNTS' SANGHA BANGALORE

VOL - 21 DECEMBER - 2025 ISSUE - 12



**ಸಾಹಿತ್ಯ ಪ್ರಕಾಶನ ಸಮಿತಿ**

ಚೇರ್‌ಪರ್ಸನ್ ಮತ್ತು ಗೌರವ ಸಂಪಾದಕರು:
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ

**ಸಹ ಸಂಪಾದಕರು:**
ಶ್ರೀ ದೀಪಕ್ ಜೆ. ಶೆಟ್ಟಿ

**ಗೌರವ ಸಲಹೆಗಾರರು:**
ಶ್ರೀ ಎಂ. ಮುರಲೀಧರ ಹೆಗ್ಡೆ
ಶ್ರೀ ಬಾಲಕೃಷ್ಣ ಶೆಟ್ಟಿ (ಎಬಿ ಶೆಟ್ಟಿ)
ಡಾ. ದೀಪಕ್ ಶೆಟ್ಟಿ

**ಸಂಪಾದಕೀಯ ಮಂಡಳಿ**
ಶ್ರೀಮತಿ ನಿರ್ಮಲ ಸಿ. ರೈ
ಶ್ರೀ ಪ್ರಸಾದ್ ಶೆಟ್ಟಿ ಸೀತಾನದಿ
ಶ್ರೀಮತಿ ಸ್ಮಿತಾ ಬಲ್ಲಾಳ್
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀ ಸಂದೀಪ್ ಹೆಗ್ಗದ್ದೆ
ಶ್ರೀಮತಿ ಶ್ಯಾಮಲ ಶೆಟ್ಟಿ

**ಪತ್ರಿಕಾ ಸಲಹಾ ವಿಭಾಗ:**
ಸಮಾಜ ಸೇವೆ ವಿಭಾಗ: ಶ್ರೀ ಜಯರಾಮ ಶೆಟ್ಟಿ ನೂಜಾಡಿ
ಕಾನೂನು ಸಲಹೆಗಾರರು: ಶ್ರೀಮತಿ ಸುಪ್ರೀತಾ ಕೆ. ಶೆಟ್ಟಿ
ಆರೋಗ್ಯ ಮಾಹಿತಿ ವಿಭಾಗ: ಡಾ. ಶಾಲ್ಮಲೀ ಸುರೇಶ್
ಮನೋರಂಜನಾ ವಿಭಾಗ: ಶ್ರೀಮತಿ ರೇವತಿ ಶೆಟ್ಟಿ
ಶೈಕ್ಷಣಿಕ ವಿಭಾಗ: ಶ್ರೀಮತಿ ನಂದಿನಿ ನಾಗರಾಜ್ ಶೆಟ್ಟಿ
ಕ್ರೀಡಾ ವಿಭಾಗ: ಶ್ರೀ ನವೀನ್ ಶೆಟ್ಟಿ

**ಪೋಷಕ ಸದಸ್ಯರು:**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ. ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು:**
ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ


## ಒಳ ಪುಟಗಳಲ್ಲಿ.....


| | ಪುಟ |
|---|---|
| ಸಂಪಾದಕೀಯ | 2 |
| ಅಧ್ಯಕ್ಷರ ಮಾತು | 3 |
| ಗೌರವ ಕಾರ್ಯದರ್ಶಿಯವರ ವರದಿ | 4 |
| ಕನ್ನಡವೆಂದರೆ ಬರೀ ನುಡಿಯಲ್ಲ ಹಿರಿದಿದೆ ಅದರರ್ಥ ಜಲವೆಂದರೆ ಕೇವಲ ನೀರಲ್ಲ.... ಅದು ಪಾವನ ತೀರ್ಥ | 5 |
| **Bunts' Sangha RNS Evening College, Graduation – 2025** | 6 |
| ಬಂಟರ ಸಂಘ ಬೆಂಗಳೂರು, ದೀಪಾವಳಿ ಸಂಭ್ರಮ | 7 |
| ಬಂಟರ ಸಂಘ ಬೆಂಗಳೂರು – ಕ್ರೀಡಾ ಸಮಿತಿ –2025–26 | 10 |
| **Bunts' Sangha R.N.S. Composite PU College Spoorthy-2025- Report** | 11 |
| "ವೈದ್ಯಕೀಯ ವಿಭಾಗ ಮತ್ತು ವಿಮೆ", ಉಚಿತ ತಜ್ಞ ವೈದ್ಯಕೀಯ ಶಿಬಿರ | 12 |
| **AWARDS FOR EXELLENCE** | 14 |
| ಯುವ ವಿಭಾಗ, ಹೊಸ ವರ್ಷಾಚರಣೆ ಪೋಸ್ಟರ್ ಬಿಡುಗಡೆ ಕಾರ್ಯಕ್ರಮ | 15 |
| ಕ್ರೀಡಾ ಸಮಿತಿ | 18 |


### ಮುಖ ಪುಟ

ದೀಪಾವಳಿ ಸಂಭ್ರಮ

ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ – ಕರ್ನಾಟಕ ರಾಜ್ಯೋತ್ಸವ ಆಚರಣೆ

ಬಂಟರ ಸಂಘ ಆರ್.ಎನ್.ಎಸ್. ಸಂಜೆ

ಕಾಲೇಜು–ಗ್ರಾಜ್ಯುಯೇಷನ್ ಡೇ


ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ. – ಸಂಪಾದಕ ಮಂಡಳಿ

# ಸಂಪಾದಕೀಯ



## ಮಾನವ ಅಭಿವೃದ್ಧಿ ವರ್ತಮಾನದ ಧ್ಯೇಯ

ಜನರು ರಾಷ್ಟ್ರದ ನೈಜ ಸಂಪತ್ತು ಇದ್ದಂತೆ. ಜನರ ಯೋಗಕ್ಷೇಮದ ಮಟ್ಟವನ್ನು ಅರಿಯುವ ಮೂಲಕ ಮಾನವ ಅಭಿವೃದ್ಧಿಯ ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳಬಹುದು. 'ಅಭಿವೃದ್ಧಿ'ಯ ಮುಖ್ಯ ಉದ್ದೇಶವೆಂದರೆ ಜನಸಾಮಾನ್ಯರು ಧೀರ್ಘ ಮತ್ತು ಆರೋಗ್ಯಪೂರ್ಣ ಬದುಕನ್ನು ರೂಪಿಸುವುದಾಗಿದೆ. ಮೌಲ್ಯಪೂರ್ಣ ಮತ್ತು ಗುಣಮಟ್ಟದ ಬದುಕನ್ನು ನಿರ್ವಹಿಸುವ ಸಲುವಾಗಿ ಅರಿವು ಮತ್ತು ಸಂಪನ್ಮೂಲಗಳ ಸದ್ವಿನಿಯೋಗಕ್ಕೆ ಸಂಬಂಧಿಸಿದಂತೆ 'ಅಭಿವೃದ್ಧಿ' ಪರಿಕಲ್ಪನೆಯು ವಿಶೇಷ ಗಮನಹರಿಸುತ್ತದೆ. ಒಟ್ಟು ದೇಶೀಯ ಉತ್ಪನ್ನ (ಜಿಡಿಪಿ) ಮತ್ತು ತಲಾ ಆದಾಯದ ತತ್ವದ ಮೇಲೆ ನಿಂತಿರುವ ಆರ್ಥಿಕ ಅಭಿವೃದ್ಧಿಯೇ ಅಭಿವೃದ್ಧಿಯ ನಿಜವಾದ ಮಾನದಂಡ ಅಲ್ಲ. ಹಾಗೆಯೇ ಇವು ನಿತ್ಯದ ಬದುಕಿನ ಅಗತ್ಯಗಳನ್ನು ಪೂರೈಸಲಾರವು. ಅಂದರೆ ಇವು ಅಭಿವೃದ್ಧಿಯ ಸಾಂಪ್ರದಾಯಿಕ ಮಾದರಿಗಳಾಗಿ ಪರಿಣಮಿಸಿವೆ. ಮಾನವ ಅಭಿವೃದ್ಧಿ ನಿಜವಾದ ಮಾನದಂಡ ಅಲ್ಲ. ಮಾನವ ಅಭಿವೃದ್ಧಿ ಸೂಚ್ಯಂಕ ಎಂಬುದು ಮಾನವ ಅಭಿವೃದ್ಧಿಯ ನಿಜವಾದ ಮಾನದಂಡ ಎನ್ನಬಹುದು. ಹಾಗೆಯೇ ಇದು ಉತ್ತಮ ಬದುಕಿನ ಯೋಗ್ಯ ಮಾಪನವೂ ಹೌದು. ಈ ಮಾನವ ಅಭಿವೃದ್ಧಿ ಪರಿಕಲ್ಪನೆಯು ಕಾಲ ದೇಶಗಳಿಗೆ ಅನುಗುಣವಾಗಿ ಹಲವು ಬಗೆಯ ತಿರುವುಗಳನ್ನು ಪಡೆದುಕೊಂಡಿದೆ. ಆರ್ಥಿಕ ಅಭಿವೃದ್ಧಿಯೊಂದಿಗೆ ಇತರ ರಂಗಗಳಲ್ಲಿನ ಅಭಿವೃದ್ಧಿ ಸಮಗ್ರವಾಗಿ ಮಾನವ ಅಭಿವೃದ್ಧಿ ಎನಿಸಿಕೊಳ್ಳುತ್ತದೆ.

ಆಯ್ಕೆಯ ಬದಲಾವಣೆಯ ಪ್ರಕ್ರಿಯೆಯನ್ನೇ ಮಾನವ ಅಭಿವೃದ್ಧಿ ಎಂಬುದಾಗಿ ಅರ್ಥೈಸಿಕೊಳ್ಳಬಹುದು. ಪ್ರತಿದಿನ ಮಾನವನಿಗೆ ಬೇರೆ ಬೇರೆ ರೀತಿಯ ಆಯ್ಕೆಗಳು ಎದುರಾಗುತ್ತಿವೆ. ಅವುಗಳಲ್ಲಿ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಆಯ್ಕೆಗಳು ಮಹತ್ವಪೂರ್ಣವೆನಿಸಿವೆ. ಮಾನವ ಸಮಾಜ ಅಭಿವೃದ್ಧಿಯ ಕಡೆಗೆ ತೀವ್ರಗತಿಯಲ್ಲಿ ದಾಪುಗಾಲು ಇಡುತ್ತಿರುವ ಇಂದಿನ ಆಧುನಿಕ ಸಂದರ್ಭದಲ್ಲಿ ಆಯ್ಕೆಗಳು ನಿರ್ಣಾಯಕ ಮತ್ತು ಮಹತ್ವಪೂರ್ಣ ಎನಿಸಿವೆ. ಮಾನವ ಅಭಿವೃದ್ಧಿ ಎಂಬುದು ಒಂದು ರೀತಿಯ ಉತ್ಪನ್ನವೂ ಹೌದು. ಇದು ಒಂದರ್ಥದಲ್ಲಿ ವಿಸ್ತಾರವಾದ ಆಯ್ಕೆಗಳನ್ನು ಅವಲಂಬಿಸಿದ ಪ್ರಕ್ರಿಯೆಯಾಗಿದೆ. ಆದರೆ ಈ ಪ್ರಕ್ರಿಯೆಯಲ್ಲಿನ ಆಯ್ಕೆಗಳು ಅಂತಿಮವಾಗಿ ಯಾವುದಾದರೊಂದು ಬಗೆಯ ಉತ್ಪನ್ನವನ್ನು ಬಯಸುತ್ತವೆ. ಹೀಗೆ ಮಾನವ ಅಭಿವೃದ್ಧಿಯ ಪರಿಕಲ್ಪನೆಯು ಒಂದು ಪ್ರಕ್ರಿಯೆಯ ನೆಲೆಯಲ್ಲಿ ದೂರಾಲೋಚನೆಯ ಗುರಿಗಳನ್ನು ಹೊಂದಿದೆ. ಮಾನವ ಸಾಮರ್ಥ್ಯ ಮತ್ತು ಕೌಶಲ್ಯಗಳು ಬೆಳೆದಂತೆಲ್ಲ ಆತನ ಆಯ್ಕೆಗಳು ವಿಸ್ತಾರಗೊಳ್ಳುತ್ತವೆ.

ಮಾನವ ಅಭಿವೃದ್ಧಿ ಸೂಚ್ಯಂಕವು ಕೆಲವು ಮಹತ್ವದ ಮತ್ತು ಆಯ್ಕೆಗೊಂಡ ಸೂಚಿಗಳ ಸರಾಸರಿ ಮೌಲ್ಯಗಳ ಮೇಲೆ ನಿರ್ಮಾಣಗೊಂಡಿದೆ. ಮಾನವ ಅಭಿವೃದ್ಧಿ ಸೂಚ್ಯಂಕವು ಮುಖ್ಯವಾಗಿ ಶಿಕ್ಷಣ, ಆರೋಗ್ಯ ಮತ್ತು ಜೀವನಮಟ್ಟದ ಸೂಚಿಗಳ ಮೇಲೆ ಎಣಿಕೆ ಮಾಡಲ್ಪಡುತ್ತದೆ. ಈ ಮೂರು ಸೂಚಿಗಳು ಮಾನವ ಅಭಿವೃದ್ಧಿಗೆ ಕೆಲವು ಮಹತ್ವದ ತಿರುವುಗಳನ್ನು ನೀಡುತ್ತ ಬಂದಿದೆ. ಸಂಯುಕ್ತ ಸಂಸ್ಥಾನದ ಅಭಿವೃದ್ಧಿ ಕಾರ್ಯಕ್ರಮ (ಯು.ಎನ್.ಡಿ.ಪಿ.) ನಿಗದಿಗೊಳಿಸಿದ ವ್ಯಾಖ್ಯೆಗಳ ಆಧಾರದ ಮೇಲೆ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ರೂಪಿಸುವ ವಿಧಾನಕ್ರಮ ಮತ್ತು ಚೌಕಟ್ಟು ನಿರ್ಮಾಣಗೊಂಡಿದೆ. ಆದ್ದರಿಂದ ಭಾರತದಂತಹ ಅಭಿವೃದ್ಧಿಪರ ದೇಶಗಳಲ್ಲಿನ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ರೂಪಿಸುವ ಹಂತದಲ್ಲಿ ಆರೋಗ್ಯ, ಶಿಕ್ಷಣ ಮತ್ತು ಜೀವನಮಟ್ಟದ ಸೂಚಿಗಳು ಮಹತ್ವದ ಪಾತ್ರವಹಿಸುತ್ತವೆ. ಭಾರತದ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಮೇಲಿನ ಮೂರು ಸೂಚಿಗಳ ಎಣಿಕೆಗೆ ವಿಶಿಷ್ಟ ಸ್ಥಾನವಿದೆ.

ಮಾನವ ಅಭಿವೃದ್ಧಿ ನಮ್ಮೆಲ್ಲರ ಧ್ಯೇಯವಾಗಲಿ.

**ರವೀಂದ್ರ ಶೆಟ್ಟಿ ಹಟ್ಟಿಯಂಗಡಿ**
ಸಂಪಾದಕರು

# ಅಧ್ಯಕ್ಷರ ಮಾತು



**ಪ್ರಿಯ ಸದಸ್ಯರೇ,**

**ಪರಸ್ಪರ ಬೋಧನಯಾ ಯುಕ್ತಾ:, ಸಹವಾಸೇನ ಶೋಭಿತಾ:।**
**ಗೌರವೇಣ ಚ ಸಂಯುಕ್ತಾ:, ವಸಂತಿ ಸುಖಿನೋ ಜನಾ:॥**

**ಪರಸ್ಪರ ತಿಳುವಳಿಕೆ, ಸಾಮರಸ್ಯದ ಸಹಬಾಳ್ವೆ ಮತ್ತು ಗೌರವದಿಂದ ಬದುಕುವ ಜನರು ಸಂತೋಷ ಮತ್ತು ಶಾಂತಿಯುತ ಜೀವನವನ್ನು ನಡೆಸುತ್ತಾರೆ.**

ಬಂಟರ ಸಂಘ ಬೆಂಗಳೂರು ಎಂಬುದು ಕೇವಲ ಒಂದು ಸಂಸ್ಥೆಯಲ್ಲ; ಇದು ನಮ್ಮ ಸಂಸ್ಕೃತಿ, ಪರಂಪರೆ ಮತ್ತು ಸಮುದಾಯದ ಏಕತೆಯ ಪ್ರತಿಬಿಂಬವಾಗಿದೆ. ಹಲವು ವರ್ಷಗಳ ಹಿಂದೆ ಕೆಲವು ಕನಸುಗಾರರ ಹೃದಯದಲ್ಲಿ ಮೂಡಿದ ಒಂದು ಸಣ್ಣ ಆಲೋಚನೆ, ಇಂದು ಸಾವಿರಾರು ಬಂಟ ಕುಟುಂಬಗಳಿಗೆ ಆಶ್ರಯವಾಗಿರುವುದು ನಮ್ಮೆಲ್ಲರ ಹೆಮ್ಮೆಯ ವಿಷಯ. ತಮ್ಮ ಅಮೂಲ್ಯವಾದ ಸಮಯ, ಶ್ರಮ, ಪ್ರೀತಿ ಮತ್ತು ನಿಸ್ವಾರ್ಥ ಸೇವೆಯನ್ನು ಅರ್ಪಿಸಿದ ಪ್ರತಿಯೊಬ್ಬ ಸದಸ್ಯರೂ ಈ ಸಂಘದ ರೂವಾರಿಗಳು. ಹಿರಿಯರ ಅನುಭವ, ಯುವಕರ ಉತ್ಸಾಹ, ಮಹಿಳೆಯರ ಶಕ್ತಿ – ಇವೆಲ್ಲ ಒಂದಾಗಿ ನಮ್ಮ ಸಂಘವನ್ನು ಈ ಎತ್ತರಕ್ಕೆ ತಂದಿದೆ.

ಇಂದಿನ ಸಮಾಜದಲ್ಲಿ ವೈವಿಧ್ಯತೆ ಸಹಜ. ಪ್ರತಿಯೊಬ್ಬರ ಅಭಿಪ್ರಾಯಗಳು, ಜೀವನಶೈಲಿಗಳು ಮತ್ತು ಆಲೋಚನೆಗಳು ವಿಭಿನ್ನವಾಗಿರಬಹುದು. ಆದರೆ ಅವುಗಳ ನಡುವೆ ಪರಸ್ಪರ ತಿಳುವಳಿಕೆ ಮತ್ತು ಸಹನೆ ಇದ್ದಾಗ ಮಾತ್ರ ಜೀವನ ಸುಂದರವಾಗಿರುತ್ತದೆ. 'ನಾನು' ಎಂಬ ಅಹಂಕಾರಕ್ಕಿಂತ 'ನಾವು' ಎಂಬ ಭಾವನೆ ಬೆಳೆಸಿಕೊಂಡಾಗ ಸಂಘಟನೆಯ ಶಕ್ತಿ ಹೆಚ್ಚುತ್ತದೆ. ಈ ಏಕತೆಯೇ ಬಂಟರ ಸಂಘದ ಹೆಮ್ಮೆ ಮತ್ತು ಗುರುತಾಗಿದೆ.

ಬಂಟರ ಸಂಘವು ಸದಾ ಶಿಕ್ಷಣ, ಸಂಸ್ಕೃತಿ, ಸಾಮಾಜಿಕ ಸೇವೆ ಮತ್ತು ಸಹಕಾರದ ಮೂಲಕ ಸಮುದಾಯವನ್ನು ಬಲಪಡಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದೆ. ಈ ಪ್ರಯಾಣದಲ್ಲಿ ಪ್ರತಿಯೊಬ್ಬ ಸದಸ್ಯರ ಸಹಭಾಗಿತ್ವ ಅತ್ಯಂತ ಅಗತ್ಯವಾಗಿದೆ. ಹಿರಿಯರ ಅನುಭವಕ್ಕೆ ಗೌರವ ನೀಡುತ್ತಾ, ಯುವಜನತೆಯ ಚೈತನ್ಯ ಮತ್ತು ಹೊಸ ಚಿಂತನೆಗಳಿಗೆ ಅವಕಾಶ ಕಲ್ಪಿಸುತ್ತಾ, ಪರಸ್ಪರ ಗೌರವ ಮತ್ತು ವಿಶ್ವಾಸದೊಂದಿಗೆ ಬದುಕುವುದೇ ಜೀವನದ ನಿಜವಾದ ಅರ್ಥ.

ಪ್ರಸ್ತುತ ಕಾಲಘಟ್ಟವು ಹಲವು ಸವಾಲುಗಳನ್ನು ನಮ್ಮ ಮುಂದೆ ಇಟ್ಟಿದೆ. ಇಂತಹ ಸಂದರ್ಭಗಳಲ್ಲಿ ನಾವು ಭಾವನಾತ್ಮಕವಾಗಿ ಅಲ್ಲ, ವಿವೇಕಪೂರ್ವಕವಾಗಿ ಮತ್ತು ಸಂಘದ ಹಿತವನ್ನು ಗಮನದಲ್ಲಿಟ್ಟುಕೊಂಡು ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಕೆಲವು ನಿರ್ಧಾರಗಳು ಕ್ಷಣಿಕವಾಗಿ ಕಠಿಣವಾಗಿರಬಹುದು, ಆದರೆ ಅವು ದೀರ್ಘಕಾಲೀನ ಹಿತಕ್ಕಾಗಿ ಅಗತ್ಯವಾಗಿರುತ್ತವೆ. ಸದಸ್ಯರೆಲ್ಲರೂ ಇದನ್ನು ಮನಗಂಡು ಸಂಘದ ನಿರ್ಣಯಗಳಿಗೆ ಬೆಂಬಲ ನೀಡುತ್ತಾರೆ ಎಂಬ ವಿಶ್ವಾಸ ನಮಗಿದೆ.

ನಮ್ಮ ನಡುವೆ ಭಿನ್ನಾಭಿಪ್ರಾಯಗಳು ಉಂಟಾಗಬಹುದು, ಆದರೆ ಅವು ಸಂಘದ ಏಕತೆಯನ್ನು ಕುಗ್ಗಿಸುವಂತಾಗಬಾರದು. ಪರಸ್ಪರ ಗೌರವ, ಸಂವಾದ ಮತ್ತು ಸಹಕಾರವೇ ನಮ್ಮ ಶಕ್ತಿ. ಒಗ್ಗಟ್ಟಾಗಿ ಮುಂದೆ ಸಾಗಿದರೆ ನಾವು ಯಾವುದೇ ಕಠಿಣ ಸವಾಲನ್ನು ಕೂಡ ಎದುರಿಸಬಹುದು.

ಸಂಘದ ಯೋಜನಾ ಸಮಿತಿಯ ನೇತೃತ್ವದಲ್ಲಿ, ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II ಶಾಲೆಯ ಮಹಿಳಾ ವಸತಿ ಗೃಹ ಮತ್ತು ಊಟದ ಹಾಲ್ ನಿರ್ಮಾಣ ಕಾರ್ಯವು ತ್ವರಿತಗತಿಯಲ್ಲಿ ಸಾಗುತ್ತಿದ್ದು, ಶೀಘ್ರದಲ್ಲಿ ಉದ್ಘಾಟನಾ ಕಾರ್ಯಕ್ರಮವನ್ನು ನಡೆಸುವ ಯೋಜನೆಯನ್ನು ಹಮ್ಮಿಕೊಂಡಿದ್ದೇವೆ.

ಮುಂದಿನ ದಿನಗಳಲ್ಲಿ ಯುವಜನರಿಗೆ ಅವಕಾಶಗಳು, ಶಿಕ್ಷಣಕ್ಕೆ ಉತ್ತೇಜನ, ಸಮಾಜಸೇವೆಯ ಹೊಸ ಯೋಜನೆಗಳು ಹಾಗೂ ನಮ್ಮ ಸಂಸ್ಕೃತಿಯ ಸಂರಕ್ಷಣೆಗೆ ಹೆಚ್ಚಿನ ಒತ್ತು ನೀಡುವ ಉದ್ದೇಶ ನಮ್ಮದಾಗಿದ್ದು, ಇದಕ್ಕಾಗಿ ತಮ್ಮ ಸಲಹೆ, ಸಹಕಾರ ಮತ್ತು ಸಕ್ರಿಯ ಭಾಗವಹಿಸುವಿಕೆ ಅತ್ಯಂತ ಅಗತ್ಯವಾಗಿದೆ.

ಏಕತೆ ನಮ್ಮ ಶಕ್ತಿ, ಅರಿವು ನಮ್ಮ ಮಾರ್ಗದರ್ಶಿ ಮತ್ತು ಸಹವಾಸ ನಮ್ಮ ಸಂಸ್ಕೃತಿ. ಈ ಮೌಲ್ಯಗಳನ್ನು ನಮ್ಮ ದಿನನಿತ್ಯದ ಬದುಕಿನಲ್ಲಿ ಅಳವಡಿಸಿಕೊಂಡು, ಮುಂದಿನ ಪೀಳಿಗೆಗೆ ಒಂದು ಬಲಿಷ್ಠ ಮತ್ತು ಸೌಹಾರ್ದಯುತ ಬಂಟ ಸಮುದಾಯವನ್ನು ಕಟ್ಟಿಕೊಡುವ ಸಂಕಲ್ಪವನ್ನು ಮಾಡೋಣ.

**ಇಂತಿ ತಮ್ಮ ಪ್ರೀತಿಯ**
**ಸಿ.ಎ. ಅಶೋಕ್ ಶೆಟ್ಟಿ ಎಂ**
**ಅಧ್ಯಕ್ಷರು**

# ಗೌರವ ಕಾರ್ಯದರ್ಶಿಯವರ ವರದಿ



**ಯಾವುದೇ ಗುರಿಯನ್ನು ಸಾಧಿಸಲು ಕಠಿಣ ಪ್ರಯತ್ನ ಮುಖ್ಯ. ಯಶಸ್ಸು ತಕ್ಷಣ ದೊರೆಯುವುದಿಲ್ಲ; ಅದು ನಿತ್ಯದ ಶ್ರಮದ ಫಲವಾಗಿದೆ.**

**ಮಾನ್ಯ ಸದಸ್ಯರೇ,**

ದಿನಾಂಕ 09.11.2025ರಂದು ಅಂಜನಾಪುರ ಅರ್ರೈಸ್ ಬ್ಯಾಡ್ಮಿಂಟನ್ ಅಕಾಡೆಮಿಯಲ್ಲಿ ಆಯೋಜಿಸಲಾದ ಶಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಹಾಗೂ ದಿನಾಂಕ 16.11.2025ರಂದು ಸಂಘದ ಆವರಣದಲ್ಲಿ ಚೆಸ್, ಕೇರಂ, ಟೆನ್ನಿಕ್ವಾಟ್, ಟೇಬಲ್ ಟೆನ್ನಿಸ್ ಪಂದ್ಯಾವಳಿಯಲ್ಲಿ ಸದಸ್ಯ ಬಾಂಧವರು ಅವರ ಮಕ್ಕಳೊಂದಿಗೆ ಭಾಗವಹಿಸಿ ಕ್ರೀಡಾಕೂಟವನ್ನು ಅತ್ಯಂತ ಯಶಸ್ವಿಗೊಳಿಸಿದರು. ಕ್ರೀಡಾಕೂಟವನ್ನು ಯಶಸ್ವಿಯಾಗಿ ಆಯೋಜಿಸಿದ ಕ್ರೀಡಾ ಸಮಿತಿಯ ಚೇರ್‌ಪರ್ಸನ್ ಶ್ರೀ ಸುರೇಂದ್ರ ಶೆಟ್ಟಿ ಹಡಾಳಿ, ಸಂಚಾಲಕರಾದ ಶ್ರೀ ಸಬನ್ ಶೆಟ್ಟಿ ಗುಡಿಬೆಟ್ಟು ಮತ್ತು ಅವರ ತಂಡಕ್ಕೆ ಅಭಿನಂದನೆಗಳು.

70ನೇ ಕರ್ನಾಟಕ ರಾಜ್ಯೋತ್ಸವವನ್ನು ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ ಮತ್ತು ಸಂಯುಕ್ತ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಸಂಭ್ರಮದಿಂದ ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಗೀತರಚನೆಕಾರರಾದ ಶ್ರೀ ಪ್ರಮೋದ್ ಮರವಂತೆಯವರು ಆಗಮಿಸಿದ್ದರು. ಬಂಟರ ಸಂಘ ಆರ್.ಎನ್.ಎಸ್. ಸಂಜೆ ಕಾಲೇಜಿನ ಗ್ರಾಜ್ಯುಯೇಷನ್ ಡೇಯನ್ನು ದಿನಾಂಕ 15.11.2025ರಂದು ಸಂಘದ ಆಶಾ ಪ್ರಕಾಶ್ ಶೆಟ್ಟಿ ಸಭಾಭವನದಲ್ಲಿ ಆಯೋಜಿಸಲಾಗಿತ್ತು.

ನವೆಂಬರ್ 11 ಮತ್ತು 12ರಂದು ಬಂಟರ ಸಂಘ ಆರ್.ಎನ್.ಎಸ್. ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ 'ಸ್ಫೂರ್ತಿ' ಕಾರ್ಯಕ್ರಮದಡಿಯಲ್ಲಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಸಾಂಸ್ಕೃತಿಕ ಸಮಿತಿಯ ವತಿಯಿಂದ ದಿನಾಂಕ 06.12.2025ರಂದು ರಂಗೋಲಿ, ಚಿತ್ರ ಬಿಡಿಸುವ ಸ್ಪರ್ಧೆ ಮತ್ತು ರಸಪ್ರಶ್ನೆ ಹಾಗೂ ದಿನಾಂಕ 07.12.2025ರಂದು ಛದ್ಮವೇಷ, ಆಶು ಭಾಷಣ ಮತ್ತು ಸಂಗೀತ ಸ್ಪರ್ಧೆಗಳನ್ನು ಸಂಘದ ಆವರಣದಲ್ಲಿ ಅಚ್ಚುಕಟ್ಟಾಗಿ ಆಯೋಜಿಸಿದಂತಹ ಸಾಂಸ್ಕೃತಿಕ ಸಮಿತಿಯ ಚೇರ್‌ಪರ್ಸನ್ ಶ್ರೀ ರಮೇಶ್ ಜಿ. ಶೆಟ್ಟಿ, ಸಂಚಾಲಕರಾದ ಶ್ರೀ ಸಂತೋಷ್ ಶೆಟ್ಟಿ ತಲೇಕಳ ಮತ್ತು ಅವರ ತಂಡಕ್ಕೆ ಅಭಿನಂದನೆಗಳು. ಅತೀ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಮತ್ತು ಅವರ ಮಕ್ಕಳು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ವೈದ್ಯಕೀಯ ವಿಭಾಗದ ವತಿಯಿಂದ ಹಾಗೂ ನಾಗರಬಾವಿ ಫೋರ್ಟಿಸ್ ಆಸ್ಪತ್ರೆಯ ಸಹಯೋಗದೊಂದಿಗೆ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಶಾಲಾ ವಿದ್ಯಾರ್ಥಿಗಳಿಗೆ ವೈದ್ಯಕೀಯ ತಪಾಸಣಾ ಶಿಬಿರವನ್ನು ದಿನಾಂಕ 08.12.2025 ರಿಂದ 10.12.2025ರವರೆಗೆ ಸಂಘದ ಆವರಣದಲ್ಲಿ ಆಯೋಜಿಸಲಾಗಿತ್ತು. ಶಿಬಿರವನ್ನು ಯಶಸ್ವಿಯಾಗಿ ಆಯೋಜಿಸಿದ ವೈದ್ಯಕೀಯ ವಿಭಾಗದ ಚೇರ್‌ಪರ್ಸನ್ ಶ್ರೀ ಎಸ್. ಪ್ರಶಾಂತ್ ಶೆಟ್ಟಿ, ಸಂಚಾಲಕರಾದ ಶ್ರೀ ಸುಪ್ರೀತ್ ಶೆಟ್ಟಿ ಮತ್ತು ಅವರ ತಂಡಕ್ಕೆ ಹಾಗೂ ಫೋರ್ಟಿಸ್ ಆಸ್ಪತ್ರೆಯ ಸಿಬ್ಬಂದಿ ವರ್ಗಕ್ಕೂ ಧನ್ಯವಾದಗಳು.

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–2 ಶಾಲಾ ಆವರಣದಲ್ಲಿ ದಿನಾಂಕ 13.12.2025ರಂದು 'ಯುರೇಕಾ' ಸೈನ್ಸ್ ಎಕ್ಸಿಬಿಷನ್‌ನ್ನು ಆಯೋಜಿಸಲಾಗಿತ್ತು. ಅತಿಥಿಗಳಾಗಿ ಪರಮ್ ಸಂಸ್ಥೆಯಿಂದ ಅಪರ್ಣಾ ಅಗರ್‌ವಾಲ್‌ರವರು ಆಗಮಿಸಿದ್ದರು.

ಸಂಘದ ಯುವ ವಿಭಾಗವು ದಿನಾಂಕ 31.12.2025ರಂದು ಹೊಸ ವರ್ಷ 2026ನ್ನು ಸ್ವಾಗತಿಸಲು ಸಂಘದ ಆವರಣದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಸದಸ್ಯರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

ಇಂತಿ ತಮ್ಮ ಪ್ರೀತಿಯ
**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

# ಕನ್ನಡವೆಂದರೆ ಬರೀ ನುಡಿಯಲ್ಲ ಹಿರಿದಿದೆ ಅದರರ್ಥ
# ಜಲವೆಂದರೆ ಕೇವಲ ನೀರಲ್ಲ.... ಅದು ಪಾವನ ತೀರ್ಥ

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಮತ್ತು ಸಂಯುಕ್ತ ಪದವಿಪೂರ್ವ ಕಾಲೇಜಿನ ಆವರಣದಲ್ಲಿ 15 ನವೆಂಬರ್ 2025ರಂದು 70ನೇ ಕರ್ನಾಟಕ ರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಕನ್ನಡಾಂಬೆ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ದೀಪ ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ವಿದ್ಯುಕ್ತಚಾಲನೆ ನೀಡಲಾಯಿತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಗೀತರಚನೆಕಾರರಾಗಿ ಕನ್ನಡಿಗರ ಮನ ಗೆದ್ದ ಶ್ರೀ ಪ್ರಮೋದ್ ಮರವಂತೆ ಅವರು ಮಾತನಾಡಿ ಕನ್ನಡಿಗರ ಸಂಸ್ಕೃತಿ, ಸಾಹಿತ್ಯ ಮತ್ತು ಕವಿ ದಿಗ್ಗಜರಿಂದ ಆದ ಸ್ವಂತಿಕೆಯನ್ನು ಬೆಳಸಿಕೊಂಡು ಮುಂದುವರಿಯುತ್ತಿರುವುದು ನಮ್ಮೆಲ್ಲರ ಹೆಮ್ಮೆ. ಅವರ ಪ್ರಶಂಸನೀಯ ಈ ನುಡಿಗಳ ಜೊತೆಗೆ ಕಾಂತಾರ ಸಿನಿಮಾದ ಸ್ವರಚಿತ 'ಸಿಂಗಾರ ಸಿರಿಯೇ....' ಹಾಡನ್ನು ಹಾಡಿದರು. ಅವರ ಜೊತೆಗೆ ಕುಮಾರಿ ಆರ್ನಾ ಶೆಟ್ಟಿಯವರು ಧ್ವನಿ ಗೂಡಿಸಿದರು. ಶಾಲಾ ಆಡಳಿತ ಮಂಡಳಿ ಶ್ರೀ ಪ್ರಮೋದ ಮರವಂತೆ ಅವರನ್ನು ಗೌರವ ಪೂರ್ವಕವಾಗಿ ಸನ್ಮಾನಿಸಿದರು.




ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿರುವ ಬಂಟರ ಸಂಘದ ಮಹಿಳಾ ಉಪಾಧ್ಯಕ್ಷರಾದ ಶ್ರೀಮತಿ ಕಾಂತಿ ಶೆಟ್ಟಿಯವರು ಕನ್ನಡ ನೆಲ-ನುಡಿಯ ಹಿರಿಮೆಯನ್ನು ತಿಳಿಸಿಕೊಟ್ಟರು. ಶಾಲಾ ಸಂಚಾಲಕರು ಮತ್ತು ಸಂಘದ ಗೌರವ ಕಾರ್ಯದರ್ಶಿಯವರಾದ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿಯವರು ಕರ್ನಾಟಕದ ಹಿರಿಮೆ, ಗರಿಮೆ, ಕನ್ನಡ ನಾಡು ಮತ್ತು ಮಾತೃ ಭಾಷೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿದರು.

ಕನ್ನಡನಾಡಿನ ಸಂಸ್ಕೃತಿ, ಕನ್ನಡ ನಾಡನ್ನು ಆಳಿದ ರಾಜ ಮನೆತನಗಳ ಬಗ್ಗೆ ಸಮೂಹ ಗಾನ, ನೃತ್ಯ, ನಾಟಕ ಪ್ರದರ್ಶನಗಳೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮ ಕನ್ನಡಾಭಿಮಾನಿಗಳನ್ನು ಮನರಂಜಿಸಿತು.

ಪ್ರಾಂಶುಪಾಲರಾದ ಶ್ರೀಮತಿ ಉಷಾ ಸಂತೋಷರವರು ಎಲ್ಲರನ್ನು ಸ್ವಾಗತಿಸಿದರು. ಕುಮಾರಿ ಸಾಧ್ವಿ ಶೆಟ್ಟಿ ಮತ್ತು ನಿವೇದಿತ ಕಾರ್ಯಕ್ರಮದ ನಿರೂಪಣೆಯನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಕುಮಾರಿ ಪ್ರತಿಷ್ಠಾ ಶೆಟ್ಟಿಯವರು ವಂದನಾರ್ಪಣೆ ಸಲ್ಲಿಸಿದರು.

**ಕನ್ನಡದ ನೆಲ ತಂಪು ......... ಕನ್ನಡದ ನುಡಿ ಕಂಪು**
**ಹಕ್ಕಿಗಳ ಇಂಚರದಂತೆ ಪದಗಳ ಇಂಪು .........**
**ಬಣ್ಣಿಸಲಾಗುವುದೇ ಕನ್ನಡವ .........**

# BUNTS' SANGHA RNS EVENING COLLEGE GRADUATION – 2025

Graduation is only a concept in real life everyday you graduate. Graduation is a process that goes on until the last day of your life. If you can grasp that, you will make a difference.

Graduation day is a ceremonial occasion marking the culmination of years of academic effort and achievement. Graduation day is a time of joy, reflection and celebration.




It marks the end of one chapter and the exciting beginning of another. It is a day of the students whose emotions slides from happiness and success to a face of sadness which refers to end of the journey.

The Bunt's Sangha RNS Evening College had its Graduation Day celebrated on 15th of November 2025, Saturday at the campus "Seminar Hall"with zeal and zest. The primary objective of graduation is to recognise and celebrate the academic achievements of graduating students. It serves as a milestone to mark the transition from one phase of life to another as students prepare to embark upon their future journey. The programme began with an invocation, invoking his blessings for the well being of all, followed by lighting of the lamp signifying the path from darkness to light. Madam Principal, Smt. Shyamala Shetty, welcomed the Chief Guest, Honourable President of Bunts Sangha CA. Ashok Shetty M Secretary – Sri Vijay J Shetty Haladi, Treasurer Sri Ashok Kumar Shetty, Lady Vice President Smt. Kanthi Shetty, Joint Secretary Smt. Jayashri C Rai , BSRNS Vidyaniketan and Composite PU College Principal Smt. Usha Santosh.



The programme progressed with the reading of the annual report and administering the oath to the graduating student. The ceremony continued with the by distribution of course completion certificate followed by award and prize distribution for sports and cultural events conducted for graduating students, best outgoing students, best performer award distribution are recognised for their academic and extra co-curricular achievements through awards and honours.

The cynosure of the cultural events where students showcased there amazing and unique talents which enthralled the gathering and made the evening memorable to everyone and the programme ended with the relishing dishes being cherished for the longest time.

# ಬಂಟರ ಸಂಘ ಬೆಂಗಳೂರು
# ದೀಪಾವಳಿ ಸಂಭ್ರಮ

ಬೆಂಗಳೂರು ಬಂಟರ ಸಂಘದ ಕಾರ್ಯಕ್ರಮಗಳಲ್ಲಿ ದೀಪಾವಳಿ ಸಂಭ್ರಮಾಚರಣೆ ವಿಶೇಷ ಮಹತ್ವವನ್ನು ಪಡೆದು ಪ್ರತೀ ವರ್ಷದಂತೆ ದಿನಾಂಕ 02.11.2025ರಂದು ಸಡಗರ ಸಂಭ್ರಮದೊಂದಿಗೆ ಜರುಗಿತು.




ಸಾಂಸ್ಕೃತಿಕ ಸಮಿತಿಯ ಚೇರ್‌ಪರ್ಸನ್ ಶ್ರೀ ರಮೇಶ್ ಜಿ. ಶೆಟ್ಟಿಯವರು ಸಂಘದ ಅಧ್ಯಕ್ಷರನ್ನು ಹಾಗೂ ಪದಾಧಿಕಾರಿಗಳನ್ನು, ಕಾರ್ಯಕಾರಿ ಸಮಿತಿ ಸದಸ್ಯರನ್ನು ಹಾಗೂ ಸರ್ವ ಸದಸ್ಯರನ್ನು ಪ್ರೀತಿ ಪೂರ್ವಕವಾಗಿ ಸ್ವಾಗತಿಸಿದರು. ಅಂತರ್ ಬಂಟರ ಸಂಘ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಮೂಡಬಿದಿರೆ, ಕಾರ್ಕಳ, ಮೈಸೂರು, ಸುರತ್ಕಲ್, ತೀರ್ಥಹಳ್ಳಿ ಮತ್ತು ಗುರುಪುರ ಬಂಟರ ಸಂಘಗಳ ಸಾಂಸ್ಕೃತಿಕ ತಂಡಗಳು ಅತ್ಯಂತ ಉತ್ಸಾಹದಿಂದ ಭಾಗವಹಿಸಿದವು. ಪ್ರತಿಯೊಂದು ತಂಡಗಳು ಅತ್ಯಮೋಘ ಪ್ರದರ್ಶನ ನೀಡಿದ್ದು, ಕಾರ್ಯಕ್ರಮ ನೋಡುಗರ ಕಣ್ಣಿಗೆ ಹಬ್ಬವಾಗಿತ್ತು. ಈ ಸ್ಪರ್ಧೆಯಲ್ಲಿ ಸುರತ್ಕಲ್ ಬಂಟರ ಸಂಘ ಪ್ರಥಮ ಸ್ಥಾನ ಪಡೆದಿದ್ದು, ದ್ವಿತೀಯ ಸ್ಥಾನವನ್ನು ಕಾರ್ಕಳ ಬಂಟರ ಸಂಘ ಪಡೆಯಿತು. ತೃತೀಯ ಸ್ಥಾನ ಗುರುಪುರ ಬಂಟರ ಸಂಘದ ಪಾಲಾಯಿತು. ಈ ಸ್ಪರ್ಧೆಗೆ ಖ್ಯಾತ ರಂಗ ನಿರ್ದೇಶಕ ಶ್ರೀ ಕೃಷ್ಣಮೂರ್ತಿ ಕವತ್ತಾರ್, ನಟಿ ಭಾರತಿ ಹೆಗ್ಡೆ ಹಾಗೂ ನಟ ಶ್ರೀ ಧನಂಜಯ ಪದ್ರಾಯಿ-ತೀರ್ಪುಗಾರರಾಗಿ ಭಾಗವಹಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಅಭಿಷೇಕ್ ಶೆಟ್ಟಿಯವರು ನಿರ್ವಹಿಸಿದರು.




ಸುರತ್ಕಲ್ ಬಂಟರ ಸಂಘ




ಕಾರ್ಕಳ ಬಂಟರ ಸಂಘ




ಗುರುಪುರ ಬಂಟರ ಸಂಘ

ವಿಜೇತ ತಂಡಗಳಿಗೆ ಪ್ರಥಮ ಬಹುಮಾನ ಒಂದು ಲಕ್ಷದ ಐವತ್ತು ಸಾವಿರ, ದ್ವಿತೀಯ ಬಹುಮಾನ ಎಪ್ಪತ್ತೈದು ಸಾವಿರ ಹಾಗೂ ತೃತೀಯ ಬಹುಮಾನ ಐವತ್ತು ಸಾವಿರವನ್ನು ವಿಶೇಷ ಟ್ರೋಫಿಯೊಂದಿಗೆ ನೀಡಲಾಯಿತು. ನಂತರ ನಡೆದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಅತ್ಯಂತ ಪ್ರಶಂಸನೀಯವಾಗಿ ಮೂಡಿಬಂದು ಜನಮನ್ನಣೆಗೆ ಪಾತ್ರವಾಯಿತು.

ದೀಪಾವಳಿ ಬೆಳಕಿನ ಹಬ್ಬ. ಸಾಂಕೇತಿಕ ಆಚರಣೆಗಳ ಅನಾವರಣದ ಅಂಗವಾಗಿ ಬಲೀಂದ್ರ ಪೂಜೆ, ತುಳಸೀ ಪೂಜೆ, ಗೋಪೂಜೆಯನ್ನು ಗೌರವಾನ್ವಿತ ಅತಿಥಿಗಳು, ಪದಾಧಿಕಾರಿಗಳು, ಸದಸ್ಯರನ್ನೊಳಗೊಂಡು ವಿಜೃಂಭಣೆಯಿಂದ ನೆರವೇರಿಸಲಾಯಿತು. ಗೌರವಾನ್ವಿತ ಅತಿಥಿಗಳನ್ನು ಸಭಾಂಗಣದ ಮುಂಭಾಗದಿಂದ ವಾದ್ಯ ಘೋಷಗಳೊಂದಿಗೆ ಕರೆತರಲಾಯಿತು.






ಸುಂದರ ಸಂಜೆಯ ಸಭಾಕಾರ್ಯಕ್ರಮದ ನಿರೂಪಕಿ ಶ್ರೀಮತಿ ನಂದಿನಿ ಶೆಟ್ಟಿಯವರು ಅತಿಥಿ ಅಭ್ಯಾಗತರನ್ನು ಹಾಗೂ ಪದಾಧಿಕಾರಿಗಳನ್ನು ವೇದಿಕೆಗೆ ಬರಮಾಡಿಕೊಳ್ಳುವುದರೊಂದಿಗೆ ಚಾಲನೆ ನೀಡಲಾಯಿತು. ಸಂಘದ ಸದಸ್ಯರಾದ ಶ್ರೀಮತಿ ದೀಪಾ ಆರ್. ಶೆಟ್ಟಿಯವರ ಪ್ರಾರ್ಥನೆಯ ನಂತರ ಸಂಘದ ಗೌರವ ಕಾರ್ಯದರ್ಶಿ ಶ್ರೀ ವಿಜ0ಯ್ ಜೆ. ಶೆಟ್ಟಿ ಹಾಲಾಡಿಯವರು ವೇದಿಕೆಯ ಮೇಲೆ ವಿರಾಜಮಾನರಾಗಿದ್ದ ಅತಿಥಿಗಳನ್ನು, ಪದಾಧಿಕಾರಿಗಳನ್ನು ಮತ್ತು ನೆರೆದ ಸಭಿಕರನ್ನು ಸ್ವಾಗತಿಸಿದರು. ನಂತರ ಮುತ್ತೈದೆಯರು ಬಿಂದಿಗೆಯಲ್ಲಿ ನೀರನ್ನು ವೇದಿಕೆಗೆ ತಂದು ಹಂಡೆಗೆ ತುಂಬಿಸಿ ಭತ್ತದ ಹೊಲಿ ರಾಶಿ ಪೂಜೆಯೊಂದಿಗೆ ದೀಪ ಪ್ರಜ್ವಲನೆಯನ್ನು ವೇದಿಕೆಯ ಮೇಲಿದ್ದ ಗಣ್ಯರು ನೆರವೇರಿಸಿದರು.




ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಬೆಂಗಳೂರು ಲೋಕಸಭಾ ಕ್ಷೇತ್ರದ ಮಾನ್ಯ ಸಂಸದರಾದ ಶ್ರೀ ತೇಜಸ್ವಿ ಸೂರ್ಯ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಡಾ. ಜಯಕರ ಶೆಟ್ಟಿ ಎಂ.ರವರು ಆಗಮಿಸಿದ್ದರು. ಇದೇ ಸಂದರ್ಭದಲ್ಲಿ ಪ್ರಗತಿಪರ ಕೃಷಿಕರಾದ ಶ್ರೀ ತ್ಯಾಂಪಣ್ಣ ಶೆಟ್ಟಿಯವರನ್ನು ಸರ್ವರ ಸಮ್ಮುಖದಲ್ಲಿ ಸನ್ಮಾನಿಸಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಸಿಎ. ಅಶೋಕ್ ಶೆಟ್ಟಿ ಎಂ. ವಹಿಸಿದ್ದರು. ಕಾರ್ಯಕ್ರಮದ ಕೊನೆಯಲ್ಲಿ ಜೊತೆ ಕಾರ್ಯದರ್ಶಿ ಶ್ರೀಮತಿ ಜಯಶ್ರೀ ಸಿ. ರೈಯವರು ಧನ್ಯವಾದ ಸಮರ್ಪಿಸಿದರು.




ಸಭಾಕಾರ್ಯಕ್ರಮದ ನಂತರ ಶ್ರೀ ವಿಠ್ಠಲ್ ನಾಯಕ್‌ರವರ ಗೀತಾ ಸಾಹಿತ್ಯ ವೈವಿಧ್ಯವು ಸಭಿಕರ ಮೆಚ್ಚುಗೆಗೆ ಪಾತ್ರವಾಯಿತು.




ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿಯ ಸದಸ್ಯರು, ಹಾಗೂ ಸಾಂಸ್ಕೃತಿಕ ಸಮಿತಿಯ ಸದಸ್ಯರೆಲ್ಲರೂ ಒಟ್ಟುಗೂಡಿ ಕಾರ್ಯಕ್ರಮವನ್ನು ಚಂದಗೊಳಿಸುವಲ್ಲಿ ಬಹುಮುಖ್ಯ ಪಾತ್ರವಹಿಸಿದ್ದರು.

## ದೀಪಾವಳಿ ಸಂಭ್ರಮಾಚರಣೆಯಲ್ಲಿ ಕೈ ಜೋಡಿಸಿದ ದಾನಿಗಳು

ಸಿಎ. ಅಶೋಕ್ ಶೆಟ್ಟಿ, ಎಂ.
ಶ್ರೀ ಎ.ಎನ್. ಶೆಟ್ಟಿ
ಶ್ರೀ ಪ್ರದೀಪ್‌ರಾಜ್ ಶೆಟ್ಟಿ
ಶ್ರೀ ಸುಕುಮಾರ್ ಶೆಟ್ಟಿ
ಶ್ರೀ ಮುರಲೀಧರ ಹೆಗ್ಡೆ
ಡಾ. ಜಗದೀಶ್ ವಿ. ಶೆಟ್ಟಿ
ಶ್ರೀ ಸಂತೋಷ್ ಕುಮಾರ್ ಶೆಟ್ಟಿ
ಮಾಂಡೋವಿ ಮೋಟಾರ್ಸ್
ಶ್ರೀಮತಿ ರಶ್ಮಿ, ಶ್ರೀ ಸಾಯಿ ಸಾರೀಸ್
ಭಾರತಿ ಕನ್‌ಸ್ಟ್ರಕ್ಷನ್ಸ್

ಶ್ರೀ ಅಶೋಕ್ ಕುಮಾರ್ ಶೆಟ್ಟಿ, ಹೆಚ್.
ಶ್ರೀ ಶೇಖರ್ ಶೆಟ್ಟಿ
ಶ್ರೀ ಬೇಳೂರು ರಾಘವೇಂದ್ರ ಶೆಟ್ಟಿ
ಶ್ರೀ ಜಗನ್ನಾಥ್ ಶೆಟ್ಟಿ
ಹರ್ಷ ಎಂಟರ್‌ಪ್ರೈಸಸ್
ಡಾ. ಸುರೇಂದ್ರ ಶೆಟ್ಟಿ ಕೊಡ್ಲಾಡಿ
ಶ್ರೀ ಎಂ.ಸಿ.ಆರ್ ಶೆಟ್ಟಿ
ಬ್ಯಾಂಕ್ ಆಫ್ ಬರೋಡ
ಸೀಮಾ ಎಂಟರ್‌ಪ್ರೈಸಸ್
ಶ್ರೀ ಚಂದ್ರ ಕುಮಾರ್

ಇಂಡಸ್ಟ್ರಿಯಲ್ ಕ್ಯಾಟರಿಂಗ್
ಶ್ರೀ ರಂಜನ್‌ದಾಸ್ ಶೆಟ್ಟಿ
ಮೆ॥ ಶೀಲಾ ಇಕ್ವಿಪ್‌ಮೆಂಟ್ಸ್ ಪ್ರೈ.ಲಿ.
ಶ್ರೀಮತಿ ಮಾಲತಿ ಜೆ. ಶೆಟ್ಟಿ
ಹೇಮಂತ್ ಟಿವಿಎಸ್
ಶ್ರೀ ಉಮೇಶ್ ಶೆಟ್ಟಿ ಎಂ.ಬಿ.
ಎಸ್.ಎಲ್.ವಿ. ಬುಕ್ ಹೌಸ್
ಶಬರಿ ಕೇಟರರ್ಸ್
ಮುತ್ತೂಟ್ ಫಿನ್‌ಕಾರ್ಪ್ ಲಿ.
ಶ್ರೀ ಉಮೇಶ್ ಪೂಂಜ ಡಿ

## ದೀಪಾವಳಿ ಸಂಭ್ರಮಾಚರಣೆಯಲ್ಲಿ ಕೈ ಜೋಡಿಸಿದ ಪ್ರಾಯೋಜಕರು

ಶ್ರೀ ಸುನೀಲ್ ಕುಮಾರ್ ಶೆಟ್ಟಿ ಜೆ.
ಶ್ರೀಮತಿ ಗೀತಾ ಶೆಟ್ಟಿ

**ಸಂತೋಷ್ ಶೆಟ್ಟಿ ತಲೇಕಳ**
ಸಂಚಾಲಕರು, ಸಾಂಸ್ಕೃತಿಕ ಸಮಿತಿ

**ರಮೇಶ್ ಜಿ. ಶೆಟ್ಟಿ**
ಚೇರ್‌ಪರ್ಸನ್, ಸಾಂಸ್ಕೃತಿಕ ಸಮಿತಿ

# ಬಂಟರ ಸಂಘ ಬೆಂಗಳೂರು – ಕ್ರೀಡಾ ಸಮಿತಿ –2025–26

ಬೆಂಗಳೂರು ಬಂಟರ ಸಂಘದ ಕ್ರೀಡಾ ಸಮಿತಿಯ ವತಿಯಿಂದ, ದಿನಾಂಕ 09.11.2025 ರಂದು ಅರೈಸ್ ಬ್ಯಾಡ್ಮಿಂಟನ್ ಅಕಾಡೆಮಿಯಲ್ಲಿ ಶಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯನ್ನು ಹಾಗೂ ದಿನಾಂಕ 16.11.2025 ರಂದು ಬಂಟರ ಸಂಘದ ಆವರಣದಲ್ಲಿ ಒಳಾಂಗಣ ಕ್ರೀಡಾಕೂಟಗಳನ್ನು ಆಯೋಜಿಸಲಾಗಿತ್ತು.



**ಶಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿ**



**ಚೆಸ್**



**ಕೇರಂ**



**ಟೆನ್ನಿಕ್ವಾಯಿಟ್**



**ಟೇಬಲ್ ಟೆನ್ನಿಸ್**

ಆಸಕ್ತ ಸದಸ್ಯರು ಹಾಗೂ ಅವರ ಮಕ್ಕಳು ಶಟಲ್ ಬ್ಯಾಡ್ಮಿಂಟನ್ ಪಂದ್ಯಾಟ ಹಾಗೂ ಒಳಾಂಗಣ ಕ್ರೀಡೆಗಳಾದ ಚೆಸ್, ಕೇರಂ, ಟೆನ್ನಿಕ್ವಾಯಿಟ್ ಮತ್ತು ಟೇಬಲ್ ಟೆನ್ನಿಸ್ ಕ್ರೀಡೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮ ನೈಪುಣ್ಯತೆ ಮತ್ತು ಕ್ರೀಡಾ ಸ್ಫೂರ್ತಿಯನ್ನು ಮೆರೆದು, ವಿಜೇತರು ಪ್ರಶಸ್ತಿಗಳಿಗೆ ಭಾಜನರಾದರು. ಕಾರ್ಯಕ್ರಮದಲ್ಲಿ ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಸಂಘದ ಸದಸ್ಯರುಗಳು ಭಾಗವಹಿಸಿದ್ದರು. ಉತ್ತಮವಾದ ಊಟೋಪಚಾರದ ವ್ಯವಸ್ಥೆಯೊಂದಿಗೆ ಕ್ರೀಡಾ ಸಮಿತಿಯ ಸದಸ್ಯರು ಪಂದ್ಯಾವಳಿಯನ್ನು ಯಶಸ್ವಿಯಾಗಿ ಆಯೋಜಿಸಿದರು.

**ಸಬನ್ ಶೆಟ್ಟಿ ಗುಡಿಬೆಟ್ಟು**
ಸಂಚಾಲಕರು, ಕ್ರೀಡಾ ಸಮಿತಿ

**ಸುರೇಂದ್ರ ಶೆಟ್ಟಿ ಹಡಾಳಿ**
ಚೇರ್‌ಪರ್ಸನ್, ಕ್ರೀಡಾ ಸಮಿತಿ

# Bunts' Sangha R.N.S. Composite PU College
# Spoorthy-2025- Report



Spoorthy Cultural Fest was conducted on 11th and 12th November 2025. The fest consisted of various competitions like Essay writing, debate (Eng/Hin), Mehendi, Cooking without fire, Best out of waste, Fruits & Vegetables carving, Shloka recitation, Nail Art & tattoo design, Wall painting, Ragoli & Bridal Makeup, Solo and Duet singing.



Stage events of Spoorthy was held on 13th Nov in RTB Auditorium. The programme was president by the President of Bunts' Sangha Sri CA Ashok Shetty, Convenor & Secretary of Bunts' Sangha Sri Vijay J. Shetty Halady & Madam Principal Smt. Usha Santhosh. The dignitaries were welcomed followed by an invocation song by college choir group. Lighting of the lamp was done by the dignitaries, cultural committee & student council. The secretary spoke about utilizing the platform to showcase their talents. Principal encouraged the students with her words of wisdom. The president emphasized the equal opportunities to be given to extra curricular activities. The vote of thanks was rendered and the stage events officially began. It consisted of solo singing finals followed by a mesmerizing fashion show of varied themes like Tribals, Greek mythology, Desi fusion, Indian mythology and Indo-western styles. The most awaited Dance competition rocked the stage with various dance forms thoroughly entertaining the audience. The programme came to an end with the singing of National Anthem.

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

## "ವೈದ್ಯಕೀಯ ವಿಭಾಗ ಮತ್ತು ವಿಮೆ"
## ಉಚಿತ ತಜ್ಞ ವೈದ್ಯಕೀಯ ಶಿಬಿರ'

**ದಿನಾಂಕ: 26.01.2026, ಸೋಮವಾರ (ಗಣರಾಜ್ಯೋತ್ಸವ ದಿನದಂದು)**
**ಸಮಯ: ಬೆಳಿಗ್ಗೆ 09.00 ರಿಂದ ಮಧ್ಯಾಹ್ನ 2.00 ರವರೆಗೆ**

## ಸ್ಥಳ: ಬಂಟರ ಸಂಘದ ಆವರಣ

1. ಫೋರ್ಟೀಸ್ ಆಸ್ಪತ್ರೆ, ನಾಗರಭಾವಿ ಇವರ ಸಹಯೋಗದೊಂದಿಗೆ, ಹೃದಯ ತಪಾಸಣಾ ಶಿಬಿರ (ECG, ECHO ಅಗತ್ಯವಿದ್ದಲ್ಲಿ) ತುರ್ತು ಹೃದಯ ಪ್ರಥಮ ಚಿಕಿತ್ಸೆ ಪ್ರಾತ್ಯಕ್ಷತೆ (CPR)
2. ಎಸೆನ್ಶಿಯಲ್ ಆಸ್ಪತ್ರೆ, ರಿಂಗ್ ರೋಡ್– ನಾಗರಭಾವಿ, ಆಶ್ರಯ ಆಸ್ಪತ್ರೆ– ಸುಂಕದಕಟ್ಟೆ ಮತ್ತು ವೈದ್ಯಕೀಯ ವಿಭಾಗ ಮತ್ತು ವಿಮೆ – ಬಂಟರ ಸಂಘ ಬೆಂಗಳೂರು ಇವರ ಸಹಯೋಗದೊಂದಿಗೆ, ಮೂಳೆ ಮತ್ತು ಕೀಲು ಸಂಬಂಧಿತ ತಪಾಸಣಾ ಶಿಬಿರ ಮತ್ತು Bone Density Test
3. ಈಶ್ವರ್ ಮಲ್ಪೆ ತಂಡದಿಂದ ಉಚಿತ ಶ್ರವಣ ಪರೀಕ್ಷೆ ಮತ್ತು ಸಹಾಯಧನದಲ್ಲಿ ಶ್ರವಣ ಯಂತ್ರದ ವಿತರಣೆ
4. ಪ್ರೀಮಿಯರ್ ಸಂಜೀವಿನಿ ಆಸ್ಪತ್ರೆ, ಟಿ– ದಾಸರಹಳ್ಳಿ , ಬೆಂಗಳೂರು ಇವರ ಸಹಯೋಗದೊಂದಿಗೆ, ಸಾಮಾನ್ಯ ಪರೀಕ್ಷೆ ಮತ್ತು ನೋಂದಣಿ (BP, Blood Sugar Test, ECG)
5. ಲಯನ್ಸ್ ಕ್ಲಬ್ ಇವರಿಂದ – ರಕ್ತದಾನ ಶಿಬಿರ
6. ಸಂಘದ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಚಿಕಿತ್ಸೆ ಒಡಂಬಡಿಕೆ – ಆಸ್ಪತ್ರೆಗಳೊಂದಿಗೆ ಸಮಾಜ ಬಾಂಧವರೆಲ್ಲರೂ ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ.

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

**ಸಿಎ. ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು

**ಸುಪ್ರೀತ್ ಶೆಟ್ಟಿ**
ಸಂಚಾಲಕರು
ವೈದ್ಯಕೀಯ ಸಮಿತಿ
**ಮೊ.: 9980550436**

**ಪ್ರಶಾಂತ್ ಶೆಟ್ಟಿ ಎಸ್**
ಚೇರ್‌ಪರ್ಸನ್
ವೈದ್ಯಕೀಯ ಸಮಿತಿ
**ಮೊ.: 9164148290**

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ವೈದ್ಯಕೀಯ ಸಮಿತಿ ಸದಸ್ಯರು.**

**ನೋಂದಣಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:–**
**ಕೆ. ನಿರಂಜನ್ ಶೆಟ್ಟಿ**
**9620215965**

**ಬಂಟರ ಸಂಘದ ಕಛೇರಿ**
**080–23399323 / 7022119739**

ಬಂಟರ ಸಂಘ ಬೆಂಗಳೂರು

BUNTS' SANGHA BANGALORE

ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ ಸಮಿತಿ



# 26ನೇ ವಾರ್ಷಿಕೋತ್ಸವ

## ಆತ್ಮೀಯ ಕರೆಯೋಲೆ

ಆಸ್ತಿಕ ಬಂಧುಗಳೇ,

ಸಂಘದ ಸಂಕೀರ್ಣದಲ್ಲಿರುವ "ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ"ದ 26ನೇ ವಾರ್ಷಿಕೋತ್ಸವವನ್ನು **2026ನೇ ಜನವರಿ, 19ನೇ ತಾರೀಕು ಸೋಮವಾರ**ದಂದು ಅದ್ದೂರಿಯಾಗಿ ವಿಶೇಷ ಪೂಜಾಲಂಕಾರದೊಂದಿಗೆ ನೆರವೇರಿಸಲು ನಿಶ್ಚಯಿಸಿರುತ್ತೇವೆ.

ಕಾರ್ಯಕ್ರಮಗಳ ವಿವರ :

| | |
|---|---|
| ಬೆಳಿಗ್ಗೆ 8.00 ಗಂಟೆಗೆ | : ಅಭಿಷೇಕ ಮತ್ತು ಗಣಹೋಮ |
| ಬೆಳಿಗ್ಗೆ 9.00 ಗಂಟೆಗೆ | : ಭಜನಾ ಕಾರ್ಯಕ್ರಮ |
| ಮಧ್ಯಾಹ್ನ 12.00 ಗಂಟೆಗೆ | : ಮಹಾಮಂಗಳಾರತಿ ಮತ್ತು ಪ್ರಸಾದ ವಿತರಣೆ |
| ಮಧ್ಯಾಹ್ನ 1.00 ಗಂಟೆಗೆ | : ಅನ್ನಸಂತರ್ಪಣೆ |
| ಮಧ್ಯಾಹ್ನ 2.00 ರಿಂದ | : ಮನರಂಜನಾ ಕಾರ್ಯಕ್ರಮಗಳು |

ಸಂಘದ ಸಂಕೀರ್ಣದಲ್ಲಿ ನಡೆಯುವ ಪೂಜಾ ಕಾರ್ಯಕ್ರಮಕ್ಕೆ ಭಕ್ತಾದಿಗಳಾದ ತಾವು ಕುಟುಂಬ ಸಮೇತರಾಗಿ ಆಗಮಿಸಿ, ಶ್ರೀ ಮಹಾಗಣಪತಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತಾ, ತಮಗೆ ಆದರದ ಸ್ವಾಗತವನ್ನು ಕೋರುವ,

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

**ಪ್ರಸಾದ್ ಕುಮಾರ್ ಶೆಟ್ಟಿ**
ಸಂಚಾಲಕರು
ಪ್ರಾರ್ಥನಾ ಮಂದಿರ ಸಮಿತಿ

**ಸಿಎ. ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು

**ಶೋಭಾ ಶೇಖ**
ಚೇರ್ ಪರ್ಸನ್
ಪ್ರಾರ್ಥನಾ ಮಂದಿರ ಸಮಿತಿ

ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಪ್ರಾರ್ಥನಾ ಮಂದಿರ ಸಮಿತಿ ಸದಸ್ಯರು

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :

**ಶೋಭಾ ಶೇಖ, ಚೇರ್ ಪರ್ಸನ್, ಪ್ರಾರ್ಥನಾ ಮಂದಿರ ಸಮಿತಿ. ಮೊ: 99018 85998**

ವಿ.ಸೂ: 'ಅಭಿಷೇಕ' ಮಾಡಿಸುವ ಭಕ್ತಾದಿಗಳು ರೂ. 151/-ನ್ನು, 'ಗಣಹೋಮ' ಮಾಡಿಸುವವರು ರೂ. 251/-ನ್ನು ಮತ್ತು ಶಾಶ್ವತ ಪೂಜೆ ಮಾಡಿಸುವವರು ರೂ. 1251/- ನ್ನು ಸಂಘದ ಕಛೇರಿಯಲ್ಲಿ ಅಥವಾ ದೇವಸ್ಥಾನದಲ್ಲಿ ಪಾವತಿಸಿ ರಸೀದಿ ಪಡೆಯಬೇಕಾಗಿ ವಿನಂತಿ.

# AWARDS FOR EXELLENCE

## Following awards for the year 2025-26 available to achievers of excellence in various fields as described below

1. Mr. C.L Naik Memorial Award for the **Best Outgoing Engineering Student.**
2. Dr. K.K Hegde Memorial Award for the **Best Outgoing Medical Student.**
3. Mr. M. Sunder Ram Shetty Memorial Award for the **Best Outgoing Commerce Student.**
4. Mrs. AmmanniRamanna Shetty Memorial Award for the **Best All round Girl Student.**
5. Mr. CharmakkiNarayana Shetty Award for the **Best outgoing Law Student**.
6. Mrs. Akkayya N. Shetty Award for the **Best Outgoing Dental Student.**
7. Mr. K.P Ramanna Shetty Award for the **Best B.Sc (Ag)/ P.U.C (Science) Student.**
8. Mr. H.T Bhandary Award for the **Best Student in Sports.**
9. Mr. P.S Thimmappa Shetty Memorial Award for **Any Achievement for Excellence.**
10. Ms. Sheetal Krishnappa Memorial Award for a **Girl showing All-round Excellence.**
11. Master Jayasheel G. Shetty Memorial Award for the **Outstanding Student in B.E (Electronics) or any other branch of Engineering.**
12. Miss. Raksha Rai Memorial Award for **Excellence in Classical Music.**
13. Mullad Lakshmi Sheenappa Shetty Award for the **Best outgoing student in Veterinary Science.**
14. Smt. Kenjooru Nayakara Mane Doddakka Ananth Shetty Memorial Award for the **Best Outgoing Female Medical Student.**
15. Sri. Maralimane Ananth Shetty Memorial Award for the **Best Outgoing Ophthalmologist" or any other Post Graduation in Medicine.**
16. Miss. Raksha M Shetty Memorial Award for **Excellence in Classical Dance**.
17. Sri. Mohandas N Hegde Memorial Awards for **Best Outgoing Law Student**.
18. Sri. NiddodiPremdas Shetty Memorial Award for **All-round Excellence Boy Rural Student.**
19. Kolkebail Nadumane Shrimathi Vanajakshi Karunakar Shetty Memorial Award for **All-round Excellence Girl Student.**
